ಅಧ್ಯಕ್ಷರು:– ಆಯಿತು, ಈಗ ಬೋಪಯ್ಯನವರು. ಅರಣ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಿ.

5. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ

ಬೇಡಿಕೆ ಸಂಖ್ಯೆ:– 8

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಸಾರ್ವಜನಿಕರು ಅರಣ್ಯ ಇಲಾಖೆಯ ಮೇಲೆ ಟೀಕೆ ಮಾಡುತ್ತಿರುವುದು ಅಥವಾ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಸಮಸ್ಯೆಗಳೆಲ್ಲಾ ಮಲೆನಾಡು ಭಾಗದಲ್ಲಿ ಮಾತ್ರ ಇದೆ ಎಂದು ನಾನು ಮೊದಲಿಗೆ ಯೋಚನೆ ಮಾಡಿದೆ. ಆದರೆ ಮೊನ್ನೆ ಶಿವಲಿಂಗೇಗೌಡರು ಮಾತನಾಡುತ್ತಾ, ನನ್ನ ಊರಿನಲ್ಲಿ ಮರವೇ ಇಲ್ಲ, ಆ ಜಾಗವನ್ನೂ ಅರಣ್ಯ ಎಂದು ಹೇಳುತ್ತಿದ್ದಾರೆ ಎಂದು ಹೇಳಿದರು. ಅರಣ್ಯ ಇಲಾಖೆಯ ಕಾರ್ಯವೈಖರಿಯಿಂದಾಗಿ ಈ ಎಲ್ಲ ಸಮಸ್ಯೆಗಳು ಆಗುತ್ತಿವೆ. Organization structure of Forest Department ಎಂದು ಕೊಟ್ಟಿದ್ದಾರೆ. ಅಲ್ಲಿಗೆ ಮುಖ್ಯಸ್ಥರಾದ Principal Secretaryಯವರದ್ದೂ ಇದರಲ್ಲಿ ಕಾಣುತ್ತಿಲ್ಲ, ಮಂತ್ರಿಗಳದ್ದೂ ಕಾಣುತ್ತಿಲ್ಲ. Principal Chief Conservator of Forests (Head of Forests-Force). ಇನ್ನೊಬ್ಬರು Principal Chief Conservator of Forests (Wild Life Warden). ಅವರ ಕೆಳಗಿರುವ ಅಧಿಕಾರಿಗಳ ಪಟ್ಟಿಯನ್ನು ನೋಡಿದರೆ, ಅವರಿಗೆ ಅರಣ್ಯ ಭವನದೊಳಗೆ ಏನು ಕೆಲಸ ಎಂದು ನನಗೇ ಗೊತ್ತಾಗುವುದಿಲ್ಲ. Additional Principal Chief Conservator of Forests (Evaluation, Working Plan and Training, Bangalore). ಇನ್ನೊಬ್ಬರು, Additional Principal Chief Conservator of Forests (Development). ಅವರ ಕೆಳಗೆ ಮತ್ತೊಂದಿಷ್ಟು ಅಧಿಕಾರಿಗಳು. Additional Principal Conservator of Forests (Head Quarters), ಅವರ ಕೈಕೆಳಗೆ ಮತ್ತೊಂದಿಷ್ಟು ಅಧಿಕಾರಿಗಳು. ಎಲ್ಲರೂ C.F., C.C.F. cadreನವರು.

ಮತ್ತೊಬ್ಬರು, Additional Principal Conservator of Forests (Head Quarters, Co-ordination), ಅವರ ಕೈಕೆಳಗೆ ಮೂರು ಜನ C.F.ಗಳು, D.C.F.ಗಳು, C.C.F.ಗಳು ಇದ್ದಾರೆ, ಅವರೇ ಕೊಟ್ಟ ವರದಿ ಪ್ರಕಾರ ಒಟ್ಟಾರೆಯಾಗಿ 164 ಜನ I.F.S. cadreನವರಿದ್ದಾರೆ. ಅವರಿಗೆ ಏನು ಕೆಲಸ ಎನ್ನುವುದನ್ನು ಮಂತ್ರಿಗಳು ಉತ್ತರ ಹೇಳುವಾಗ ಹೇಳಬೇಕು. Working Plan ಮತ್ತೊಂದು, ಎಲ್ಲವೂ ಇದೆ. ಅದು ಏನೇನು ಎಂದು ನನಗೇ ಗೊತ್ತಾಗುವುದಿಲ್ಲ. ಈ 164 ಜನ ಅಧಿಕಾರಿಗಳೂ ಅರಣ್ಯ ಇಲಾಖೆಯಲ್ಲಿಯೇ ಇದ್ದಾರೆಯೇ ಎನ್ನುವುದನ್ನು ಅವರು ಉತ್ತರದಲ್ಲಿ ಕ್ಲಾರಿಫೈ ಮಾಡಬೇಕು. ಒಬ್ಬರು Principal Conservator of Forests ವಿದೇಶದಲ್ಲಿದ್ದಾರೆ ಎಂದು ಒಂದು ಕಡೆ ಕೊಟ್ಟಿದ್ದಾರೆ. ಏಕೆ ಇದ್ದಾರೆ ಎಂದು ಗೊತ್ತಿಲ್ಲ. ವಿದೇಶದಲ್ಲಿದ್ದಾರೆ ಎಂದು ಅವರೇ ಹೇಳಿದ್ದಾರೆ. ನಾನು ಉದಾಹರಣೆಗೆ ಹೇಳುತ್ತೇನೆ, ನಮ್ಮ ಜಿಲ್ಲೆ ಮೂರು ತಾಲ್ಲೂಕು ಇರುವಂಥ ಜಿಲ್ಲೆ, ಎರಡು ವಿಧಾನಸಭಾ ಕ್ಷೇತ್ರಗಳಿವೆ. ಇಲ್ಲಿ ಒಟ್ಟು ಎಷ್ಟು ಅರಣ್ಯ ಅಧಿಕಾರಿಗಳಿದ್ದಾರೆ ಎಂದರೆ, ಐದು ಜನ D.F.O.ಗಳು, ಇಬ್ಬರು Conservator of Forests, ಅದರಲ್ಲಿ ಒಬ್ಬರು Chief Conservator of Forests, ಇನ್ನೊಬ್ಬರು Conservator cadre for Plantation and Social Forests. ಅವರು ಅಲ್ಲಿ ಕೆಲಸ ಮಾಡುವುದಿಲ್ಲ. ಅವರು ಕೊಡಗಿನಲ್ಲಿ ಇಲ್ಲ. ಅವರು ಎಲ್ಲಿದ್ದಾರೆ ಎಂದು ಹುಡುಕಬೇಕು. ಅವರ ಕೆಲಸಗಳು ಏನು ಎನ್ನುವುದನ್ನು ಹೇಳಬೇಕು. ಹಿಂದೆ ಕೊಡಗು ಜಿಲ್ಲೆಯಲ್ಲಿ Conservator of Forests ಎಂದು ಒಬ್ಬರು ಮಾತ್ರ ಇದ್ದರು. ಕೊಡಗು, ದಕ್ಷಿಣ ಕನ್ನಡ, ಹಾಸನ, ಮೈಸೂರು, ಚಿಕ್ಕಮಗಳೂರು ಇಷ್ಟು ಜಿಲ್ಲೆಗಳಿಗೆ ಒಬ್ಬರೇ Conservator of Forests ಇದ್ದರು. ಆದರೆ ಇವತ್ತು ಒಂದು ಸಣ್ಣ ಜಿಲ್ಲೆಗೆ ಇಬ್ಬರಿದ್ದಾರೆ. ಸಣ್ಣ ಜಿಲ್ಲೆ, ಹೋಗಲಿ, forest ಏನಾದರೂ ಬೆಳೆಯುತ್ತಾ ಬಂದಿದೆಯೇ? ಬೆಳೆಯುತ್ತಾ ಏನೂ ಬರಲಿಲ್ಲ. ಇವರು ಸೇರಿಸಿಕೊಳ್ಳುವುದು. ಇದನ್ನು ಆಮೇಲೆ ನಾನು ಹೇಳುತ್ತೇನೆ. ಏನಿದೆಯೋ ಅಷ್ಟೇ ಇದೆ. ನೀವು ಭೂಮಿಯನ್ನು ಅಗಲ ಮಾಡುತ್ತಿದ್ದೀರಾ? Forest ಇದ್ದುದನ್ನು ಕಾಯುವಂಥದ್ದೇ ಆಗುತ್ತಿಲ್ಲ. ಇವತ್ತು ಅರಣ್ಯ ರಕ್ಷಣೆ ಮಾಡುವಂಥದ್ದು

ಹೇಗಿದೆ? ಇವರ ಕರ್ತವ್ಯಗಳು ಏನು ಎನ್ನುವುದನ್ನು ಬಹಳ ಸಷ್ಟವಾಗಿ ಉತ್ತರದಲ್ಲಿ ಮಾನ್ಯ ಮಂತ್ರಿಯವರು ಹೇಳಬೇಕೆಂದು ನನ್ನ ವಿನಂತಿ ಇದೆ. ಇವರ Actನಲ್ಲಿ ಸುಮಾರು 5, 6, 7, Actಗಳಿವೆ. Karnataka Forest Act, Karnataka Preservation of Trees Act, Wild Life Act, Central Forest Conservation Act, Karnataka Forest Rules....

ಶ್ರೀ ವೈ.ಎಸ್.ವಿ. ದತ್ತಾ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ. ನಮಗೆ ಅವರಿಂದ ಹೇಳಿಕೆ ಕೊಡಿಸಿ. ಏಕೆಂದರೆ ಅದು ಆಗಿಬಿಟ್ಟರೆ, ಚರ್ಚೆ ಸುಗುಮವಾಗಿ ಹೋಗುತ್ತದೆ.

ಅಧ್ಯಕ್ಷರು:– ಸ್ವಲ್ಪ ತಾಳಿ. ಏಕೆ ಗಡಿಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲ ಕಾಯಿದೆಗಳನ್ನು ಇಟ್ಟುಕೊಂಡು ಇವರ ಇಲಾಖೆಯ ಮುಖ್ಯ ಜವಾಬ್ದಾರಿಗಳು ಈ ಕೆಳಕಂಡಂತೆ ಇವೆ. ಇವರದ್ದು ಮೊದಲನೆಯ ಜವಾಬ್ದಾರಿ ಕಳ್ಳ ಸಾಗಾಣಿಕೆ, ಬೇಟೆಯಾಡುವಿಕೆ, ಬೆಂಕಿ ಸಂರಕ್ಷಣೆ ಮತ್ತು ಇತರ ಕಾರಣಗಳಿಂದ ಈಗ ಇರುವ ಸಸ್ಸ ಮತ್ತು ವನ್ಯ ಜೀವಿಗಳ ಸಂರಕ್ಷಣೆ.

6. ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ

ವಿಷಯ:– ಇಂಧನ ಇಲಾಖೆ ಕುರಿತಂತೆ ಸದನ ಸಮಿತಿ ಮಾಡುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆ ಮೇಲೆ ಚರ್ಚೆ ನಡೆಯುವಾಗ ಜೆ.ಡಿ.ಎಸ್.ನ ನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಒಂದು ಸಲಹೆಯನ್ನು ಮಾಡಿದ್ದರು. ಆಮೇಲೆ ಅವರು ಒತ್ತಾಯದ ರೂಪ ತಳೆದಿದ್ದರು. ಇಂಧನ ಇಲಾಖೆಯಲ್ಲಿ ವಿದ್ಯುತ್ ಅನ್ನು ಖರೀದಿ ಮಾಡಿರತಕ್ಕಂಥದ್ದು, ವಿದ್ಯುತ್‌ನ ಅಗತ್ಯತೆ, ಉತ್ಪತ್ತಿ, ಇವೆಲ್ಲದರ ಬಗ್ಗೆ ಒಂದು ಸದನ ಸಮಿತಿ ಮಾಡಬೇಕೆಂದು ಒತ್ತಾಯ ಮಾಡಿದ್ದಾರೆ. ಆಮೇಲೆ terms of reference ಏನು ಮಾಡಬೇಕೆಂಬುದನ್ನು ಸರ್ಕಾರ ಮಾಡುತ್ತದೆ. ಈಗ ನನಗೆ ಬಹಳ ಮುಖ್ಯವಾಗಿ ಬಹುಶಃ ಮಾನ್ಯ